ಕುರಿಗಾರರು ತಮ್ಮ ಹೊಲಗಳಲ್ಲಿ ಬೀಡುಬಿಡುವಂತೆ ಮಾಡುವುದು; ಅದರಿಂದ ಯಥೇಷ್ಟವಾಗಿ ಬೀಳುವ ಕುರಿ ಹಿಕ್ಕೆಗಳಿಂದ ಕಾಂಪೋಸ್ಟ್ ಗೊಬ್ಬರ ಹಾಕಿದಂತಾಗಿ ನೆಲಕ್ಕೆ ಫಲವತ್ತತೆ ಒದಗಿ, ಮುಂದಿನ ವರ್ಷದ ಉತ್ತಮ ಫಸಲಿಗೆ ದಾರಿಯಾಗುತ್ತಿತ್ತು.

ಕತ್ತಲಾವರಿಸುವ ಮೊದಲೇ ಕುರಿಗಳನ್ನು ಒಟ್ಟಾಗಿಸಿ ಕಾಡು ಪ್ರಾಣಿಗಳಿಗೆ ಆಹಾರವಾಗದಂತೆ ನಿಗಾವಹಿಸಿ ಸುತ್ತ ಕಾವಲಿಗಾಗಿ ನಾಯಿಗಳನ್ನು ನೇಮಿಸುತ್ತಾರೆ. ಬೆಳಕಿರುವಾಗಲೇ ಬೆಂಕಿಯ ಸುತ್ತ ಊಟಕ್ಕೆ ಕೂತರು. ನಾನು ಕುತೂಹಲದಿಂದ ನೋಡುತ್ತಲೇ ಇದ್ದೆ. ನನಗೆ ಔಡಲ ಎಲೆಗಳಲ್ಲಿ ಬಡಿಸಿದ ನುಚ್ಚಿಗೆ- ಹಾಲು ಸುರಿದು ಉಣ್ಣಲು ಹೇಳಿದರು. ಪಕ್ಕದಲ್ಲಿ ಇಬ್ಬರು ಮೆತ್ತನೆಯ ಆ ಎರಿ ನೆಲವನ್ನು ಬಗೆದು ನೀರು ಚಿಮುಕಿಸಿ ತಟ್ಟಿ ತೀಡಿ ಕಲಾತ್ಮಕವಾದ ಹರಿವಾಣದಂತೆ ಮಾಡಿಕೊಂಡು ಅದಕ್ಕೆ ಸಂಗಟಿ- ನುಚ್ಚು ನೀಡಿಸಿಕೊಂಡು ಯಥೇಚ್ಛವಾಗಿ ಹಾಲು ಸುರಿಸಿಕೊಂಡು ಕಲಸಿ ಉಣ್ಣುವುದು. ಅದೇ ತಗ್ಗಿಗೆ ಇನ್ನಷ್ಟು ನುಚ್ಚು ಹಾಲು ಸುರಿದು ಕಲಸಿ ಅಲ್ಲೇ ಕಾದು ಕೊಂಡಿದ್ದ ನಾಯಿಗಳಿಗೆ ಬಿಡುತ್ತಿದ್ದರು. ನಾಯಿಗಳೂ ಅಷ್ಟೇ. ಕಲಸಿದನ್ನಕ್ಕೆ ಮಣ್ಣ ಕಣಗಳು ಬೆರೆಯದಂತೆ ಹುಷಾರಾಗಿ ಉಂಡು, ನೆಕ್ಕಿ ಕಾಲ್ದೆಗೆಯುತ್ತಿದ್ದವೆನ್ನಿರಿ. ನಂತರ ಸುತ್ತಲಿದ್ದ ಮಣ್ಣನ್ನು ಯಥಾಸ್ಥಿತಿ ಮುಚ್ಚಿ ಕೈ ತೊಳೆದುಕೊಳ್ಳುತ್ತಿದ್ದರು. ನಿಜವಾದ ಮಣ್ಣಿನ ಮಕ್ಕಳೆಂದು ಇವರಿಗೇ ಅನ್ನಬೇಕು!

ಮನೆಯ ಮಗನೆನ್ನುವಂತೆ ಉಪಚರಿಸುತ್ತಿದ್ದ ರೀತಿಗೆ ಸಂಕೋಚವಾಗುತ್ತಿತ್ತು ನನಗೆ. ಅವರ ಆ ಪ್ರೀತಿಗೆ ಬೆಲೆ ಕಟ್ಟಲಾದೀತೆ? ಕರೀಕಂಬಳಿಯ ಗದ್ದುಗೆಯ ಮೇಲೆ ಮೈ ಚಾಚಿ ಆಕಾಶದಲ್ಲಿನ ನಕ್ಷತ್ರಗಳನ್ನೆಣಿಸುತ್ತ ಮಲಗಿದ್ದವನಿಗೆ ನಿದ್ದೆ ಆವರಿಸಿದ್ದೇ ಗೊತ್ತಾಗಲಿಲ್ಲ. ಮಧ್ಯರಾತ್ರಿ ಕಳೆದು ಎರಡು ಘಂಟೆಯ ಹೊತ್ತಿಗೆ ಚಳಿ ಬಿದ್ದಾಗ, ಹತ್ತಿರವಿದ್ದ ಕುರಿಮರಿಗಳನ್ನೇ ಮೈಮೇಲೆ ಎಳೆದುಕೊಂಡರಾಯಿತು. ಆ ಜೀವಂತ ಉಣ್ಣೆಯ ಬೆಚ್ಚಗಿನ ಹೊದಿಕೆಯೇ ಅದ್ಭುತ ಅನುಭವ!

ಬೆಳಗಾಗೆದ್ದು ನೋಡಿದರೆ ಆಗಲೇ ಎದ್ದು ಎಲ್ಲರೂ ತಂತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೇಳಿ ಮಾಡಿಸಿದಂತಿದ್ದ, ಕಟ್ಟುಮಸ್ತಾದ ದೇಹದ, ಕಲ್ಲೀಮೀಸೆಯ ಆಜಾನುಬಾಹು ಸರದಾರರು. ತಲೆಯ ಮೇಲೆ ಬಿಳಿ ಉಣ್ಣೆಯಿಂದ ಹೆಣೆದ ಸೈನಿಕ ಶಿರಸ್ತ್ರಾಣ ಹೋಲುವ ಟೊಪ್ಪಿಗೆ. ವಿಶೇಷ ಸಂದರ್ಭಗಳಲ್ಲಿ ತಲೆ ಮೇಲೆ ರುಮಾಲು - ಪಟಗದ ಕಿರೀಟ. ಅವರ ಎತ್ತರದಟ್ಟೆಯ ಆ ಕೊರಡು ಕೆರಗಳನ್ನು ನೋಡುವುದೆಂದರೇನೆ ಅಚ್ಚರಿ. ಸಾಲದೆಂಬಂತೆ ಹಿಮ್ಮಡಿಗೆ ಕಬ್ಬಿಣದ ಕುದುರೆ ನಾಲು ಬೇರೆ ಬಡಿಸಿರುತ್ತಾರೆ. ರಾತ್ರಿ ನಡೆದು ಬರುವಾಗ ಕಾಲುದಾರಿಯಲ್ಲಿ ಅಡ್ಡ ಮಲಗಿರುವ ಹಾವಿನ ಮೇಲೆ ಕಾಲಿಟ್ಟರೆ ಹಾವು ಒಂದೇ ಏಟಿಗೆ ಎರಡು ತುಂಡಾಗಬೇಕು. ನನ್ನ ಕಾಲಲ್ಲಿದ್ದ ಹವಾಯಿ ಚಪ್ಪಲಿಗಳನ್ನು ಅವುಗಳ ಮುಂದೆ ನೀವಾಳಿಸಿ ಒಗೆಯಬೇಕು. ಕರಿಜಾಲೀ ಬಡ್ಡೆಯ ಕೆಚ್ಚಿನಲ್ಲಿ ಕೆತ್ತಿ ಮಾಡಿದಂತಿದ್ದ ಅವರ ಆ ಗಟ್ಟಿಮುಟ್ಟಾದ ಶರೀರಗಳು; ಕಾಲಲ್ಲಿ ಹೇಳಿ ಮಾಡಿಸಿದ್ದ ಆ ಜಿರಕೀಜೋಡು; ಕೈಯಲ್ಲಿದ್ದ ಬಡಿಗೆಯ ಕಟ್ ಕಟ್ ಸೌಂಡು; ರಾತ್ರಿ ಹೊತ್ತು ದಾರಿಯಲ್ಲಿ ಮಲಗಿದ್ದ ಹುಳ ಹುಪ್ಪಡಿಗಳು ತಾವಾಗೇ ಪಕ್ಕಕ್ಕೆ ಸರಿದು ದಾರಿ ಮಾಡಿ ಕೊಡುತ್ತಿದ್ದವು. ಅನತಿ ದೂರ ಅವರೊಡನೆ ಕುರಿ ಮಂದೆಯ ಹಿಂದೆ ಹಿಂದೆ ನಡೆದಾಗ ಮುಳ್ಳಿನ ಕರಿ ಜಾಲಿ ಮರ ಕಂಡರೆ ಭಯವಾಗುತ್ತಿತ್ತು, ಹವಾಯಿ ಚಪ್ಪಲಿ ಹಾಕಿದ್ದ ನನಗೆ. ಮರದ ನೆರಳಿನಲ್ಲಿ ಓದಿಕೊಂಡು ಕೂರಲು ಹೇಳಿದರೂ ನನಗೆ ಮನಸ್ಸು ಬರುತ್ತಿರಲಿಲ್ಲ. ಪ್ರಕೃತಿಯ ಮಡಿಲು ಎಂದರೇನೇ ಅದೆಂಥಾ ಸೋಜಿಗ! ಕ್ಯಾಮೆರಾ ಕಣ್ಣು ಹೊತ್ತವನಾಗಿ ಹಗಲಿಡೀ ಅವರೊಂದಿಗೆ ಅಲೆಯುತ್ತಿದ್ದೆ.

ಸಣ್ಣ ಕೆರೆಯೊಂದರ ದಂಡೆಯಲ್ಲಿ ನಿಂತ ಕರಿ ಜಾಲಿ ಮರದಲ್ಲಿ ಜೋತುಬಿದ್ದ ಗೀಜಗ ಹಕ್ಕಿಯ ಹತ್ತಾರು ಗೂಡುಗಳನ್ನು ಒಂದೇ ಕಡೆ ನೋಡಿ ಅಚ್ಚರಿಯಾಯಿತು. ಅದೊಂದು ಹಕ್ಕಿಗಳ ಕಾಲನಿಯಂತೇ ತೋರುತ್ತಿತ್ತು. ಕೆಳಗೆ ಆಳವಾದ ನೀರು, ಮೈತುಂಬಾ ಮುಳ್ಳು ಇರುವ ಕರಿ ಜಾಲಿ ಮರದಲ್ಲಿ ಅವು ಗೂಡು ಕಟ್ಟಲು ಆಯ್ದು ಕೊಂಡಿದ್ದ ಆ ಆಯಕಟ್ಟಿನ ಜಾಗ ಅವಕ್ಕೆ ಎಂಥ ಸುರಕ್ಷಿತ ತಾಣ! ಪ್ರಕೃತಿಯ ಮಡಿಲಲ್ಲಿ ಪ್ರತಿಯೊಂದು ಜೀವಿಯೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಅದೆಷ್ಟು ಬಗೆಯ ಆಟ ಕಟ್ಟುತ್ತದೆ; ಅದೆಷ್ಟು ಹೋರಾಟ ಮಾಡುತ್ತಿವೆ... ಏನು ಕತೆ, ವಾಹ್!

* * *

'ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ'